ಆ) ಹಾಗಿದ್ದಲ್ಲಿ ಕಟ್ಟಡ ಕಟ್ಟಿಸಲು ಕೈಕೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).— ಅ) ಬಂದಿದೆ.

ಆ) ಆರ್ಥಿಕ ಅಡಚಣೆಯಿಂದ ಹೊಸ ಕಟ್ಟಡ ನಿರ್ಮಿಸಲು ಸಾಧ್ಯವಾಗಿಲ್ಲ. ಆದರೂ ಈ ಕಟ್ಟಡದ ದುರಸ್ತಿಯನ್ನು ಕೈಗೊಂಡಿದ್ದು, ಸದ್ಯದಲ್ಲೇ ಮುಗಿಯಲಿದೆ.

22. ಶ್ರೀ ಬಸವರಾಜ ಪಾಟೀಲ್ (ಹುಮನಾಬಾದ್) ಮಾನ್ಯ ಶಿಕ್ಷಣ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕಲಬುರ್ಗಿ ವಿಭಾಗದಲ್ಲಿ ಪ್ರಾಚಾರ್ಯರಿಲ್ಲದ ಸರ್ಕಾರಿ ಕಿರಿಯ ಮಹಾವಿದ್ಯಾಲಯಗಳೆಷ್ಟು ?

ಆ) ಎಷ್ಟು ವರ್ಷದಿಂದ ಈ ಹುದ್ದೆಗಳು ಖಾಲಿಯಿವೆ ?

ಇ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ಮತ್ತು ಈ ಹುದ್ದೆಗಳನ್ನು ಅತಿ ಶೀಘ್ರವಾಗಿ ತುಂಬಲಾಗುವುದೇ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು):— ಅ) 35.

ಆ) ಸುಮಾರು 5 ವರ್ಷಗಳಿಂದ

ಇ) ಹಿರಿಯ ಉಪನ್ಯಾಸಕರುಗಳಿಗೆ ಬಡ್ತಿ ನೀಡಿ ಪ್ರಾಚಾರ್ಯರ ಹುದ್ದೆಗಳನ್ನು ಭರ್ತಿ ಮಾಡುವುದೆಂದು ನಿರ್ಧರಿಸಲಾಗಿದೆ. ಇದಕ್ಕೆ ಬೇಕಾದ ನಿಮಯ ಮತ್ತು ಆರ್. ನಿಯಮಾವಳಿಯನ್ನು ತಿದ್ದುಪಡಿ ಮಾಡ ಬೇಕಾಗಿದೆ. ಮತ್ತು ಉಪನ್ಯಾಸಕರುಗಳ ಜ್ಯೇಷ್ಠತಾ ಪಟ್ಟಿಯನ್ನು ಸಿದ್ಧಗೊಳಿಸಲಾಗುತ್ತಿದೆ. ಇದನ್ನು ಮಾಡಿದ ಕೂಡಲೇ ಈ ಹುದ್ದೆಗಳನ್ನು ಭರ್ತಿಗೊಳಿಸಲಾಗುವುದು.

Sub-Providing Financial Assistance to the Colleges of Private Educational Institutions

ಶ್ರೀ ಬಸವರಾಜ ಪಾಟೀಲ್ (ಹುಮನಾ ಬಾದ್) ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಖಾಸಗಿ ಶಿಕ್ಷಣ ಸಂಸ್ಥೆಗಳು ಕಾಲೇಜುಗಳನ್ನು ಪ್ರಾರಂಭಿಸಿದಾಗ ಸರಕಾರದವರು ಮೂರು ವರ್ಷ ಮುಗಿದ ಕೂಡಲೇ ಧನ ಸಹಾಯ ನೀಡಬೇಕೆಂದು ಅಜ್ಞೆ ಇರುವುದೇ ?

ಆ) ಹಾಗಿದ್ದಲ್ಲಿ ಆ ಆಜ್ಞೆಯನ್ನು 5 ವರ್ಷಗಳ ಅವಧಿಗೆ ಸರಕಾರದವರು ಯಾವಾಗ ವಿಸ್ತರಿಸಿದರು ?

ಇ) ಹಾಗಾದರೆ ಈ ಆಜ್ಞೆಯ ಹೊರಡುವ ಪೂರ್ವದಲ್ಲಿ ಪ್ರಾರಂಭವಾಗಿದ್ದ ಕಾಲೇಜುಗಳಿಗೆ ಮೂರು ವರ್ಷ ಮುಗಿದ ಕೂಡಲೇ ಧನ ಸಹಾಯ ನೀಡಲಾಗಿದೆಯೇ ?

ಶ್ರೀ. ಬಿ. ರಾಚಯ್ಯ. (ಶಿಕ್ಷಣಮಂತ್ರಿಗಳು):— ಅ) ಇಲ್ಲ, ಕಾಲೇಜುಗಳು ಧನ ಸಹಾಯ ಪಡೆಯಲು ಅರ್ಹತೆಯನ್ನು ಮಾತ್ರ ಪಡೆಯುತ್ತಿದ್ದವು.

ಆ) 9-4-1981 ರಿಂದ

ಇ) 31-3-81ರ ಮೊದಲು ಮೂರು ವರ್ಷ ಮುಗಿಸಿದ ಕಾಲೇಜುಗಳು ಧನ ಸಹಾಯ ಪಡೆಯಲು ಅರ್ಹತೆ ಪಡೆದಿವೆ.

24. ಶ್ರೀ. ಲಮಾಣಿ ಹೆಗ್ಗಪ್ಪ ವೇದಪ್ಪ (ಬ್ಯಾಡಗಿ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆಯ ತಾಲ್ಲೂಕು ಶಿಕ್ಷಣಾಧಿಕಾರಿ (ಎ. ಇ. ಓ) ಹುದ್ದೆಗಳು ಖಾಲಿ ಇರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದರೆ ಈ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು):— ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಶೀಘ್ರದಲ್ಲೇ ಖಾಲಿ ಇರುವ ಹುದ್ದೆಗಳನ್ನು ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಭರ್ತಿ ಮಾಡಲಾಗುವುದು.

ಮನವಿಗಳು

ವಿಷಯ :—ಮಂತ್ರಿಗಳ ಪ್ರವಾಸ ಕಾಲದಲ್ಲಿ ಸ್ಥಳೀಯ ಶಾಸಕರನ್ನು ಕಡೆಗಣಿಸಿದ ಬಗ್ಗೆ

ಎಂ. ಮಹದೇವಪ್ಪ :—ಅಧ್ಯಕ್ಷರೇ, ಈ ಸರ್ಕಾರ ಶಾಸಕರನ್ನು ಯಾವ ರೀತಿ ಕಡೆಗಣಿಸಿದೆ ಎಂಬುದಕ್ಕೆ ನಾನು ಇಲ್ಲಿ ಹೇಳಬೇಕಾಗಿದೆ. ಇಂತಹ ನಾಚಿಕೆಗೇಡಿತನ ಪ್ರಸಂಗ ಮತ್ತೊಂದಿಲ್ಲ. ಯಾರೇ ಮಂತ್ರಿಗಳು ಯಾವುದೇ ಕ್ಷೇತ್ರದಲ್ಲಿ ಸಮಾರಂಭಕ್ಕೆ ಭಾಗವಹಿಸಲು ಬರುವಾಗ ಆ ಬಗ್ಗೆ ಆ ಕ್ಷೇತ್ರದ ಶಾಸಕರಿಗೆ ತಿಳಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ್ದರೂ ಸಹಾ ಅದನ್ನು ಇವರು ಅನುಸರಿಸುತ್ತಾ ಇಲ್ಲ. ನಿನ್ನೆ ಒಬ್ಬರು ಸಚಿವರು ನನ್ನನ್ನು ಕಡೆಗಣಿಸಿ ನನ್ನ ಕ್ಷೇತ್ರದಲ್ಲಿ ಒಂದು ಸಮಾರಂಭದಲ್ಲಿ ಭಾಗವಹಿಸಿದ್ದಾರೆ. ನಮ್ಮ ಹಿತರಕ್ಷಣೆ ಆಗಬೇಕು, ಇದು ನಾಚಿಕೆಗೇಡಿತನದ ವಿಚಾರ. ಯಾವುದೇ ಕಾರ್ಯಕ್ರಮಗಳು ಆಗಿರಲಿ, ಸ್ಥಳೀಯ ಶಾಸಕರಿಗೆ ಅಲ್ಲಿನ ಕಾರ್ಯಕ್ರಮದ ಬಗ್ಗೆ ಬರುವ ಮಂತ್ರಿಗಳ ಬಗ್ಗೆ ತಿಳಿಸಬೇಕಾಗುತ್ತದೆ. ಈ ಬಗ್ಗೆ ಸರ್ಕಾರಿ

ಅಧಿಕಾರಿಗಳೂ, ಸಚಿವರು ಎಲ್ಲರೂ ಶಾಸಕರನ್ನು ಕಡೆಗಣಿಸಿದ್ದಾರೆ ಈ ಬಗ್ಗೆ ಸರ್ಕಾರ ವ್ಯವಸ್ಥೆ ಮಾಡಬೇಕು.

ಶ್ರೀ ಕೆ. ಎಸ್. ಕಾಳಮರಿಗೌಡ:— ಯಾವುದೇ ಸಮಾರಂಭಕ್ಕೆ ಮಂತ್ರಿಗಳು ಹೋದಾಗ ಸ್ಥಳೀಯ ಶಾಸಕರಿಗೆ ತಿಳಿಸಬೇಕೆಂಬ ಬಗ್ಗೆ ಹಿಂದೆ ದೊಡ್ಡಹಳ್ಳಿ ಪ್ರಕರಣದಲ್ಲೇ ಗಲಾಟೆ ಆಗಿದೆ. ಇತ್ತೀಚೆಗೆ ನಂಜನಗೂಡಿನಲ್ಲಿ ಒಂದು ಸಮಾರಂಭ ನಡೆಯಿತು. ಆದಕ್ಕೆ ವಿಶ್ವನಾಥರೆಡ್ಡಿ ಅವರು ಹೋಗಿದ್ದರು. ಅಲ್ಲಿಗೆ ಬೇರೆಯವರು ಹೋಗಿದ್ದರು. ಆದರೆ ಅಲ್ಲಿಗೆ ಸಂಬಂಧಪಟ್ಟ ಶಾಸಕರನ್ನು ಆಹ್ವಾನಿಸಿರಲಿಲ್ಲ. ಹಾಗೂ ಉಪ್ಪಾರಬಳಗ ಸಾರ್ವಜನಿಕ ನಿಲಯದ ಸಮಾರಂಭ ನಡೆಯಿತು. ಅಲ್ಲಿಗೆ ಬೇರೆ ಬೇರೆ ಅಧಿಕಾರಿಗಳು ಬಂದಿದ್ದರು. ಮಾನ್ಯ ಅಲೆಕ್ಸಾಂಡರ್‌ರವರು ಬಂದಿದ್ದರು. ಆದರೆ ಕ್ಷೇತ್ರಕ್ಕೆ ಸಂಬಂಧಪಟ್ಟ ಶಾಸಕರಾದ ಮಹಾದೇವಪ್ರಸಾದ್‌ರವರಿಗೆ ಆಮಂತ್ರಣ ಹೋಗಿರಲಿಲ್ಲ ಈ ಬಗ್ಗೆ ಸರ್ಕಾರದಿಂದ ನಿರ್ದಿಷ್ಟವಾದ ಹೇಳಿಕೆಯನ್ನು ಕೇಳುತ್ತೇನೆ. ಸಂಬಂಧಪಟ್ಟ ಮಂತ್ರಿಗಳು ಆ ಕ್ಷೇತ್ರದ ಶಾಸಕರಿಗೆ ಕಾರ್ಯಕ್ರಮದ ಪಟ್ಟಿಯನ್ನು ಕಳುಹಿಸಿ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಪತ್ರ ಬರೆದಿದ್ದಾರೆ. ಆದರೂ ನಮಗೆ ಸೌಜನ್ಯಾಮ ಕಳುಹಿಸುವ ಗೋಜಿಗೆ ಮಂತ್ರಿಗಳು ಹೋಗಲಿಲ್ಲ. ಇಂತಹ ಸರ್ಕಾರಿ ಸಮಾರಂಭಗಳಿಗೆ ಶಾಸಕರಾದ ನಾವು ಭಾಗವಹಿಸುವ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಡಬೇಕು.

ಶ್ರೀ ಬಿ. ರಾಚಯ್ಯ— ನಂಜನಗೂಡಿಗೆ ಸಂಬಂಧಪಟ್ಟಹಾಗೆ ನಾನು ಪ್ರವಾಸ ಹೋಗಿದೆ. ಆದು ಖಾಸಗೀ ಶಾಲೆಯವರು ಗೊತ್ತು ಮಾಡಿದಂಥ ಸಮಾರಂಭ ; ಶ್ರೀಮಾನ್ ಮಹದೇವ ಅವರು ಕೂಡ ಹೋಗಿರುತ್ತಾರೆಂಬ ಭಾವನೆಯ ಮೇಲೆ ಹೋಗಿದ್ದೇ ! ಸಮಾರಂಭದಲ್ಲಿ ಅವರು ಇಲ್ಲದೇ ಇರುವುದನ್ನು ನೋಡಿ ; ಅವರನ್ನು ಏತಕ್ಕೆ ಕರೆಯಲಿಲ್ಲವೆಂದು ಕೇಳಿದೆ. ನಂಜನಗೂಡಿನ ಹೆಣ್ಣುಮಕ್ಕಳ ಪ್ರಾಥಮಿಕ ಶಾಲೆಯ ಉಪಾಧ್ಯಾಯನಿಯರ ವಿಷಯದಲ್ಲಿ ಆಲ್ಲಿನ ಮುಖಂಡರುಗಳು ಬಂದು ವರ್ಗ ಮಾಡಬೇಕೆಂದು ಕೇಳಿದಾಗ ಈ ವಿಷಯದಲ್ಲಿ ಶಾಸಕರಿಂದ ಯಾವ ಸಲಹೆಯೂ ಬಂದಿಲ್ಲ ; ಆದರೂ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ತಿಳಿಸಿ ಬಂದಿದೆನೆ. ಇಂಥ ಸಮಾರಂಭಗಳಲ್ಲಿ ಈ ಕ್ಷೇತ್ರದ ಪ್ರತಿನಿಧಿಗಳನ್ನು ಹುರಿಯಬೇಡಿ ಎಂದು ತಿಳಿಸಿ ಬಂದಿದ್ದೇನೆ.

ಶ್ರೀ ವಾ. ಮಹದೇವ.—ಮಾನ್ಯ ರಾಚಯ್ಯನವರು ಹೇಳಿದ್ದೆಲ್ಲಾ ನಿಜ. ಮಾನ್ಯ ಮಂತ್ರಿಯವರಾದ ವಿಶ್ವನಾಥ್ ಮುದ್ನಾಳ್ ಹಾಗೂ ಚಂದ್ರಪ್ರಭ ಅರಸು ಅವರು ಸಹ ಅಲ್ಲಿಗೆ ಹೋಗಿದ್ದರು.

(ಗೊಂದಲ)

ಉಪಾಧ್ಯಕ್ಷರು:—ಮಾನ್ಯ ಸದಸ್ಯರು ಪದೇ ಪದೇ ನನ್ನ ಆಪ್ಪಣೆ ಪಡೆಯದೆ ಮಾತನಾಡಬಾರದು.

ಒಬ್ಬ ಮಾನ್ಯ ಸದಸ್ಯರು:—ತಮ್ಮೆ ಮೂಲಕ ಕೇಳಲೇ ಯಾರ ಮೂಲಕ ಕೇಳಬೇಕು. ಇದರಲ್ಲಿ ಶಾಸಕರ ಆತ್ಮ ಗೌರವದ ಪ್ರಶ್ನೆ ಇದೆ.

(ಗೊಂದಲ)

ಶ್ರೀ ಕೆ. ಎಸ್. ಕಾಳಮರಿ ಗೌಡ:—ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಂದ ನಿರ್ದಿಷ್ಟವಾದ ಉತ್ತರ ಬೇಕಾಗುತ್ತದೆ. ಮಾನ್ಯ ಮಂತ್ರಿಯವರು ಪಶುವೈದ್ಯಶಾಲೆಯ ಪ್ರಾರಂಭೋತ್ಸವಕ್ಕೆ ಹೋಗಿದ್ದರು.

ಶ್ರೀ ಗೋವಿಂದ ಪಿ. ವಡೆಯರಾಜ್:—ಮಾನ್ಯ ಮುಖ್ಯಮಂತ್ರಿಯವರು ಎಲ್ಲಾ ಮಂತ್ರಿಗಳಿಗೂ ಹತ್ರಬರೆದು ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆಂದು ತಿಳಿಸಿದ್ದಾರೆ ಇದನ್ನು ತಾವುಗಳೆಲ್ಲಾ ದಯವಿಟ್ಟು ತಿಳಿದುಕೊಳ್ಳಬೇಕು.

(ಗೊಂದಲ)

ಸ್ವಾಮಿ ಮಾನ್ಯ ಶ್ರೀಕಂಠಯ್ಯನವರು ಆ ಭಾಗದ ಸದಸ್ಯರನ್ನು ಬಿಟ್ಟು ಒಂದು ಸಮಾರಂಭಕ್ಕೆ ಹೋದಂಥ ಸಂದರ್ಭದಲ್ಲಿ ದೊಡ್ಡ ಹಳ್ಳಿಯಲ್ಲಿ ಏನಾಯಿತೆಂಬುದನ್ನು ಸ್ವಲ್ಪ ಮನಸ್ಸಿನಲ್ಲಿಟ್ಟುಕೊಂಡು ಕೆಲಸ ಮಾಡಬೇಕೆಂದು ಸೂಚಿಸುತ್ತೇನೆ.

ಶ್ರೀ ವೈ. ರಾಮಕೃಷ್ಣ :—ಮಾನ್ಯ ಕೈಗಾರಿಕಾ ಮಂತ್ರಿಗಳಾದ ಬೊಮ್ಮಾಯಿಯವರು ನನ್ನ ಕ್ಷೇತ್ರಕ್ಕೆ ಪ್ರವಾಸ ಹೋಗಿದ್ದಾರೆ ; ನನಗೆ ಪ್ರವಾಸ ಹೋಗುವ ಬಗ್ಗೆ ವಿಷಯವೇ ಗೊತ್ತಿಲ್ಲ. ನನ್ನ ಕ್ಷೇತ್ರದಲ್ಲಿ ನನ್ನ ವಿರುದ್ಧವಾಗಿ ಭಾಷಣ ಮಾಡಿಸಿದ್ದಾರೆ. ಇದು ನ್ಯಾಯವೇ ; ಧರ್ಮವೇ ? ಆಯಾಯಾ ಕ್ಷೇತ್ರದ ಶಾಸಕರಿಗೂ ಆತ್ಮಗೌರವ ಇದೆಯೆಂಬುದನ್ನು ಮಾನ್ಯ ಮಂತ್ರಿಯವರು ತಿಳಿದುಕೊಳ್ಳಬೇಕು ನಾವು ಕೂಡ ಜನಗಳಿಂದ ಆಯ್ಕೆಯಾಗಿ ಬಂದಿರುತ್ತೇವೆ. ಆ ಸ್ಥಾನದಲ್ಲಿ ಕೂತುಕೂಂಡು ಈ ರೀತಿ ಮಾಡುವುದು ಸರಿಯಾಗಿ ಕಾಣುವುದಿಲ್ಲ.

ಶ್ರೀ ಎಸ್. ಆರ್. ಲಕ್ಷ್ಮಯ್ಯ :—ಸ್ವಾಮಿ, ಹಿಂದಿನ ಮಂತ್ರಿಮಂಡಲದಲ್ಲಿ ಮಂತ್ರಿಗಳಾಗಿದ್ದು ಮಾನ್ಯ ಜಕ್ಕನೂರರವರನ್ನು ಹಾಗೂ ಇತರೆ ಇಬ್ಬರು ಮಂತ್ರಿಗಳನ್ನು ಒಟ್ಟಿಗೆ ಒಂದು ಸಮಾರಂಭಕ್ಕೆ ಆಹ್ವಾನ ಮಾಡಿದ್ದೆವು; ಸುಮಾರು 5-6ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಸಮಾರಂಭದ ವ್ಯವಸ್ಥೆ ಮಾಡಿ

ದೈವ. ಇದಕ್ಕೆ ಜನತಾ ಪಕ್ಷದ ಕಾರ್ಯಕರ್ತರು ಅಧ್ಯಕ್ಷರಾಗಿದ್ದಾರೆ. ಈ ಸಮಾರಂಭಕ್ಕೆ ಯಾರೂ ಹೋಗಕೂಡದು ಎಂದು ತಿಳಿದುಕೊಂಡು ಒಬ್ಬ ಮಂತ್ರಿಯೂ ಬರಲಿಲ್ಲ. ಇವತ್ತು ಇವರು ಆರೋಪ ಹೊರಿಸುತ್ತಿದ್ದಾರೆ.

ಗೊಂದಲ

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎತ್ತಿರತಕ್ಕಂಥ ಪ್ರಶ್ನೆ ಯಾವುದೇ ಪಕ್ಷದ ಸದಸ್ಯರ ಮೇಲೆ ಹೇಳಿದಂತ ಆರೋಪಗಳಲ್ಲ ಯಾವ ಪಕ್ಷದ ಸದಸ್ಯರೇ ಆಗಿರಲಿ ಲಕ್ಷಾಂತರ ಜನರ ಪ್ರತಿನಿಧಿಯಾಗಿ ಬಂದಿರುತ್ತಾರೆ. ಇದು ಕಾನೂನು ಪ್ರಶ್ನೆಗಿಂತ ನೀತಿ ಪ್ರಶ್ನೆ ಯಾಗಿದೆ. ಯಾವ ಸಚಿವರೇ ಆಗಿರಲಿ. ತಮ್ಮ ಪ್ರವಾಸ ಕಾಲದಲ್ಲಿ ಆಯಾಯಾ ಕ್ಷೇತ್ರದ ಸದಸ್ಯರಿಗೆ ಪೂರ್ವಭಾವಿಯಾಗಿ ತಿಳುವಳಿಕೆ ಕೊಟ್ಟು ಹೋಗುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಇದರಲ್ಲಿ ಪಕ್ಷ ಪಂಗಡಗಳ ಪ್ರಶ್ನೆ ಬರುವುದಿಲ್ಲ. ಸಾರ್ವಜನಿಕ ಕೆಲಸ ಕಾರ್ಯಗಳ ವಿಷಯದಲ್ಲಿ ಆ ಭಾಗದ ಕ್ಷೇತ್ರದ ಶಾಸಕರನ್ನು ಕರೆದು ಕಳುಹಿಸು ಎಂತಾದ್ದು ಮೊದಲಿನಿಂದಲೂ ರೂಢಿಯಲ್ಲಿ ತಂದಿದ್ದೇವೆ. ತಿಳುವಳಿಕೆ ಕೊಡದೆ ಹೋಗುವುದು ಮಹಾತಪ್ಪು ಇನ್ನು ಮುಂದೆ ಈ ರೀತಿ ಆಗದಹಾಗೆ ಮಾನ್ಯ ಮಂತ್ರಿ ನೋಡಿಕೊಳ್ಳಬೇಕೆಂದು ಮನವಿ ಮಾಡಿ ಕೊಳ್ಳುತ್ತೇನೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ತಮ್ಮ ಸಹೂದ್ಯೋಗಿಗಳಿಗೆ ಸೂಚನೆ ಕೊಡುವುದು. ಆದ್ದರಿಂದ ಇದರ ಬಗ್ಗೆ ಒಂದು ಹೇಳಿಕೆ ಕೊಟ್ಟರೆ ಮಾನ್ಯ ಸದಸ್ಯರುಗಳಿಗೆ ಸಮಾಧಾನವಾಗುತ್ತದೆಂದು ನಾನು ಭಾವಿಸಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ. – ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಮ್ಮ ಪ್ರವಾಸದ ಬಗ್ಗೆ ಆಯಾ ಯಾವುದೇ ಪಕ್ಷದ ಮಾನ್ಯ ಸದಸ್ಯರಾಗಿರಲಿ-ಅವರಿಗೆ ತಿಳಿಸಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ ಎರಡು ಸಂದರ್ಭಗಳಲ್ಲಿ ಇಂತಹ ಚ್ಯುತಿಯಾಗಿರಬಹುದು. ಇದು ಆಕಸ್ಮಿಕವಾಗಿ ಆಗಿರಬಹುದು. ಯಾವ ಸಂದರ್ಭದಲ್ಲಿ ಮಾನ್ಯ ರಾಮಕೃಷ್ಣ ಅವರ ಕಾನ್‌ಸ್ಟಿಟ್ಯುಯೆನ್ಸಿಗೆ ಮಾನ್ಯ ಬೊಮ್ಮಾಯಿಯವರು ಹೋದರೋ ಗೊತ್ತಿಲ್ಲ. ಆಕಸ್ಮಿಕವಾಗಿ ಏನೋ ಕೆಲಸದ ಮೇಲೆ ಬಂದು ಹೋಗಿರಬಹುದು. ಆ ಸಂದರ್ಭದಲ್ಲಿ ತಿಳಿಸಲಿಕ್ಕೆ ಸಾಧ್ಯವಾಗದ ಪ್ರಸಂಗ ಇದ್ದಿರಬಹುದು. ಇನ್ನು ಎರಡನೆಯದು ವಿರೋಧ ಪಕ್ಷದ ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ನಮ್ಮ ಪಕ್ಷದ ಮುಖಂಡರು ಒಂದು ಕಾರ್ಯ ಕ್ರಮ ಇಟ್ಟು ಕೊಂಡಿದ್ದಾಗ ಆ ಸಂದರ್ಭದಲ್ಲಿ ಅದು ಗೊತ್ತಾಗದೇ ಇದ್ದರೂ. ಈ ಎರಡು ಸಂದರ್ಭಗಳನ್ನು ಬಿಟ್ಟರೆ ಮಂತ್ರಿಗಳು ಯಾವುದೇ ಜಿಲ್ಲೆಯಲ್ಲಿ ಯಾವುದೇ ಕ್ಷೇತ್ರಕ್ಕೆ ಪ್ರವಾಸ ಹೋಗುವಾಗಲೂ ಆಲ್ಲಿಯ ಸದಸ್ಯರಿಗೆ ತಿಳಿಸಬೇಕು. ಅವರಿಗೂ ಸಾಕಷ್ಟು ಗೌರವ ಇದೆ ಎಂದು ನಾನು ಮತ್ತೊಂದು ಸಾರಿ ನನ್ನ ಸಹೋದ್ಯೋಗಿಗಳಿಗೆ ಹೇಳ ಬಯಸುತ್ತೇನೆ.

ಶ್ರೀ ರಾಮಪ್ಪ : ತಾವು ಪಾರ್ಟಿ ಆಥವಾ ಬೇರೆ ವಿಚಾರಗಳ ಬಗ್ಗೆ ಹೋಗುವಾಗ ಸರ್ಕಾರಿ ವಾಹನದಲ್ಲಿ ಹೋಗಬಾರದು.

ಶ್ರೀ ರಾಮಕೃಷ್ಣ ಹೆಗಡೆ : ಅದು ಉತ್ತಮವಾದ ಸಲಹೆ.

ಗಮನ ಸೆಳೆಯುವ ಸೂಚನೆ

ವಿಷಯ :—ಕರ್ನಾಟಕ ಕರಾವಳಿಯಲ್ಲಿ ಮೀನಿನ ಅಭಾವದಿಂದ ಪರ್ಸೀನ್ ದೋಣಿಗಳಲ್ಲಿ ಮತ್ತು ಇತರ ಮೀನು ಸಂಸ್ಕರಣ ಘಟಕಗಳಲ್ಲಿ ಕೆಲಸ ಮಾಡುವವರ ಸಂಕಷ್ಟದ ಬಗ್ಗೆ

ಶ್ರೀ ಪ್ರತಾಪಚಂದಶೆಟ್ಟಿ:—ಕರ್ನಾಟಕ ಕರಾವಳಿಯಲ್ಲಿ ಮೀನಿನ ಅಭಾವದಿಂದ ಪರಾಸೀನ್ ದೋಣಿಗಳಲ್ಲಿ ಮತ್ತು ಇತರ ಮೀನು ಸಂಸ್ಕರಣ ಘಟಕಗಳಲ್ಲಿ ಕೆಲಸ ಮಾಡುವವರ ಸಂಕಷ್ಟದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರಗಮನವನ್ನು ಸೆಳೆಯುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ :— (ಮುಖ್ಯಮಂತ್ರಿಗಳು) 1982 ಸೆಪ್ಟೆಂಬರ್ ಮಾಹೆಯ ಪ್ರಾರಂಭವಾಗಿ 1983 ಜನವರಿವರೆಗಿನ ಪ್ರಸ್ತುತ ಮೀನುಗಾರಿಕೆ ಋತುವಿನ 5 ತಿಂಗಳಲ್ಲಿ ಇಲಾಖೆ ಸಂಗ್ರಹಿಸಿದ ಅಂಕಿ ಸಂಖ್ಯೆಗಳ ಪ್ರಕಾರ ಕರ್ನಾಟಕ ಕರಾವಳಿಯಲ್ಲಿ ಸುಮಾರು 300 ಪ್ರಸೀನ್ ದೋಣಿಗಳು ಹಿಡಿದ ಮೀನಿನ ಒಟ್ಟು ಪೊತ್ತ 46,000 ಟನ್ನಿನಷ್ಟಾಗಿದೆ. ಕಳೆದ ವರ್ಷದ ಇದೇ ಕಾಲಾವಧಿಯಲ್ಲಿ ಹಿಡಿದ ಮೀನಿನ ಪೊತ್ತ 68,000 ಟನ್ನು ಆಗಿದ್ದು ಹಿಡಿದ ಮೀನಿನ ಪ್ರಮಾಣದಲ್ಲಿ ಸುಮಾರು ಮೂರನೇ ಒಂದು ಭಾಗದಷ್ಟು ಕಡಿಮೆಯಾಗಿದೆ. ಆದರೆ ಮೀನಿನ ಸರಾಸರಿ ಮೌಲ್ಯ ಕಳೆದ ವರ್ಷಕ್ಕಿಂತ ಸುಮಾರು ಶೇಕಡಾ 25 ಈ ವರ್ಷ ಹೆಚ್ಚಿದ್ದು ಪರಸೀನ್ ಘಟಕಗಳ ಆದಾಯ ಸರಾಸರಿಗಳಿಕೆ ಈ ವರ್ಷ ಇದುವರೆವಿಗೂ ಸುಮಾರು 2½ಲಕ್ಷ ರೂಪಾಯಿ ಎಂದು ಅಂದಾಜು ಮಾಡಲಾಗಿದೆ. ತೆಪ್ಪದ ಮೀನಿನ ಅಭಾವ ಈ ವರ್ಷ ಕಂಡು ಬಂದದ್ದರಿಂದ ಇನ್ನು 2-3 ತಿಂಗಳ ಮೀನುಗಾರಿಕೆ ಋತು ಇರುವುದರಿಂದ ಸರ್ಕಾರ ಪರಿಸ್ಥಿತಿಯನ್ನು ಪರಿಶೀಲಿಸಿ ಅಗತ್ಯವಿದ್ದಲ್ಲಿ ಬೇಕಾದ ಕ್ರಮವನ್ನು